ವಿಷಯ : ಕಾಪು ಮತಕ್ಷೇತ್ರ ಫಲಿಮಾರು ಅಣೆಕಟ್ಟು ದುರಸ್ತಿ

1508 (2021)-ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಾಪು ಮತಕ್ಷೇತ್ರದ ಫಲಿಮಾರು ಅಣೆಕಟ್ಟು ದುರಸ್ತಿ ಕಾರ್ಯವು ಯಾವ ಹಂತದಲ್ಲಿದೆ?

ಆ) ದುರಸ್ತಿ ಕಾಮಗಾರಿಗೆ ಸರ್ಕಾರದವರು ನಿಗದಿಗೊಳಿಸಿರುವ ಮೊತ್ತವೆಷ್ಟು?

ಇ) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು)

ಅ) 1996-97ನೇ ಸಾಲಿನಲ್ಲಿ ಹೊಸ ಹಲಿಗೆಗಳನ್ನು ಒದಗಿಸಲಾಗಿರುತ್ತದೆ.

ಆ) ಈ ಕಾಮಗಾರಿಯ ದುರಸ್ತಿಗಾಗಿ ಸುಮಾರು 20.00 ಲಕ್ಷ ರೂ.ಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.

ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ವಿಷಯ : ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆ.

1509 (2088)-ಶ್ರೀ ಬಿ. ಎಸ್. ಯುಡಿಯೂರಪ್ಪ (ಶಿಕಾರಿಪುರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಕಳೆದ 3 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಯಾವ ಯಾವ ಯೋಜನೆಗಳನ್ನು ಆರಂಭಿಸಲಾಯ್ತು ಎಂದು ಸಂಪೂರ್ಣಗೊಳಿಸಲಾಯ್ತು? ಎಷ್ಟು ವೆಚ್ಚದಲ್ಲಿ ಎಷ್ಟು ಪ್ರಮಾಣ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ? (ಪ್ರತ್ಯೇಕವಾಗಿ ವಿವರ ನೀಡುವುದು)

2) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರಕ್ಕೆ ಪ್ರತಿ ವರ್ಷ ವಿನಿಯೋಗಿಸಿದ ಯೋಜನೆ, ಯೋಜನೇತರ ವಿಶ್ವಬ್ಯಾಂಕ್ ಅಥವಾ ಇತರೆ ಮೂಲ ಹಣ ಎಷ್ಟು?

3) ಕಳೆದ ಮೂರು ವರ್ಷಗಳಲ್ಲಿ ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆ ಮಾಡು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಶರಣಬಸಪ್ಪದರ್ಶನಾಪುರ್ (ಇಂಧನ ರಾಜ್ಯ ಸಚಿವರು)

1) ಕಳೆದ 3 ವರ್ಷಗಳಲ್ಲಿ ರಾಜ್ಯದ ವಿದ್ಯುತ್ ಉತ್ಪಾದನಾ ಸಾಮರ್ಥ್ಯಸಿ ಹೆಚ್ಚಿಸಲು **ಈ ಕೆಳಕಂಡ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.**

ಅ) ರಾಯಚೂರು ಶಾಖೋತ್ಪನ್ನ ಕೇಂದ್ರದ 5 ಮತ್ತು 6ನೇ ಘಟಕ
ಸ್ಥಾಪಿತ ಸಾಮರ್ಥ್ಯ 2X210 - 240 ಮೆ.ವ್ಯಾ.
(ವಾರ್ಷಿಕ ಕ್ಷಮತೆ 2520 ದಶಲಕ್ಷ ಯೂನಿಟ್‌ಗಳು)
ಅಂದಾಜು ವೆಚ್ಚ 1545 ಕೋಟಿ ರೂಪಾಯಿಗಳು.
ಕಾರ್ಯಗತ ವಿವರ : 5ನೇಯ ಘಟಕ9:1999
6ನೇಯ ಘಟಕ3:2000

ಆ) ಭದ್ರಾ ಬಲದಂಡೆ ಕಾಲುವೆ ಯೋಜನೆ :

ಅಂದಾಜು ವೆಚ್ಚ	:	21.29 ಕೋಟಿ ರೂ.ಗಳು.
ಸ್ಥಾಪಿತ ಸಾಮರ್ಥ್ಯ	:	1 6-6 ಮೆ. ವ್ಯಾ
ವಾರ್ಷಿಕ ಕ್ಷಮತೆ	:	25 ದಶಲಕ್ಷ ಯೂ.ಗಳು.
ಕಾರ್ಯಗತ ವಿವರ	:	2:1998

ಇದಲ್ಲದೆ ಮುಂದುವರಿಯುತ್ತಿರುವ ಯೋಜನೆಗಳು 8-(1) ಭದ್ರಾ ಆಣೆಕಟ್ಟು ಮತ್ತು ವಿದ್ಯುದಾಗಾರ :

ಅಂದಾಜು ವೆಚ್ಚ	:	33.54 ಕೋಟಿ ರೂ.ಗಳು.
ಸ್ಥಾಪಿತ ಸಾಮರ್ಥ್ಯ	:	3X50 - 150 ಮೆ. ವ್ಯಾ.ಗಳು
ವಾರ್ಷಿಕ ಕ್ಷಮತೆ	:	570 ದ.ಲ.ಯೂ.ಗಳು.
ಕಾರ್ಯಗತ ವಿವರ	:	ಆಣೆಕಟ್ಟು ಮತ್ತು ಮೊದಲನೇ ಘಟಕದ ಸ್ಥಾಪನೆ ಪೂರ್ಣಗೊಂಡಿದೆ.
ಎರಡನೇ ಘಟಕ	:	ಜೂನ್ 1998
ಮೂರನೇ ಘಟಕ	:	ಅಕ್ಟೋಬರ್ 1998

ಮಾರ್ಚ್ 97ರ ವರೆಗಿನ ಯೋಜನಾ ವೆಚ್ಚ 289 ಕೋಟಿ ರೂಪಾಯಿಗಳು.

ಇ) ಕೊಡಸಳ್ಳಿ ಆಣೆಕಟ್ಟು ಮತ್ತು ವಿದ್ಯುದಾಗಾರ

ಅಂದಾಜು ವೆಚ್ಚ	:	200 ಕೋಟಿ ರೂ.ಗಳು
ಸ್ಥಾಪಿತ ಸಾಮರ್ಥ್ಯ	:	3X40 - 120 ಮೆ. ವ್ಯಾ.
ವಾರ್ಷಿಕ ಕ್ಷಮತೆ	:	512 ದ.ಲ.ಯೂಗಳು.
ಕಾರ್ಯಗತ ವಿವರ	:	ಆಣೆಕಟ್ಟು ಮಾರ್ಚ್ 1998
ವಿದ್ಯುದಾಗಾರ	:	ಡಿಸೆಂಬರ್ 1997
ಮೊದಲನೇ ಘಟಕ	:	ಜನವರಿ 1998
ಎರಡನೇ ಘಟಕ	:	ಸೆಪ್ಟೆಂಬರ್ 1998
ಮೂರನೇ ಘಟಕ	:	ಜನವರಿ 1999

ಮಾರ್ಚ್ 1997ರ ವರೆಗಿನ ಯೋಜನಾ ವೆಚ್ಚ 137 ಕೋಟಿ ರೂಪಾಯಿಗಳು.

ಈ) ಗೇರುಸೊಪ್ಪ ಜಲವಿದ್ಯುತ್ ಯೋಜನೆ :

ಅಂದಾಜು ವೆಚ್ಚ	:	409 ಕೋ. ರೂ.ಗಳು
ಸ್ಥಾಪಿತ ಸಾಮರ್ಥ್ಯ	:	4X60 - 240 ಮೆ.ವ್ಯಾ
ವಾರ್ಷಿಕ ಕ್ಷಮತೆ	:	600 ದ.ಲ. ಯೂನಿಟ್‌ಗಳು
ಕಾರ್ಯಗತ ವಿವರ	:	ಆಣೆಕಟ್ಟು ಮೇ 2000
	:	ವಿದ್ಯುದಾಗಾರ ಮೇ 1999
	:	ಮೊದಲನೇ ಘಟಕ ಮಾರ್ಚ್ 2000
	:	ಎರಡನೇ ಘಟಕ ಜುಲೈ 2000
	:	ಮೂರನೇ ಘಟಕ ನವೆಂಬರ್ 2000
	:	ನಾಲ್ಕನೇ ಘಟಕ ಮಾರ್ಚ್ 2001

ಮಾರ್ಚ್ 1997ರ ವರೆಗಿನ ಯೋಜನಾ ವೆಚ್ಚ 119 ಕೋಟಿ ರೂಪಾಯಿಗಳು.

ಉ) ಬೃಂದಾವನ ಜಲವಿದ್ಯುತ್ ಯೋಜನೆ :

ಅಂದಾಜು ವೆಚ್ಚ	:	51.24 ಕೋಟಿ ರೂ.ಗಳು
ಸ್ಥಾಪಿತ ಸ್ಥಾವರ	:	2X6 — 12 ಮೆ.ವ್ಯಾ
ವಾರ್ಷಿಕ ಕ್ಷಮತೆ	:	65 ದ.ಲ.ಯೂನಿಟ್‌ಗಳು
ಕಾರ್ಯಗತ ವಿವರ	:	ಮೊದಲನೆ ಘಟಕ ಡಿಸೆಂಬರ್ 1999
	:	ಎರಡನೇ ಘಟಕ ಮಾರ್ಚ್ 2000

2) ರಾಜ್ಯದಲ್ಲಿ ವಿದ್ಯುತ್ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ವಿವಿಧ ಮೂಲಗಳಿಂದ ವಿನಿಯೋಗಿಸಿದ ಹಣದ ವಿವರಗಳನ್ನು ಅನುಬಂಧ-1 ರಲ್ಲಿ ವಿವರಿಸಿ ಲಗತ್ತಿಸಿದೆ.

3) ಕರ್ನಾಟಕ ರಾಜ್ಯ ಸರ್ಕಾರದ ಖಾಸಗೀ ವಲಯದಲ್ಲಿ ಒಟ್ಟು 31 ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಆರಂಭಿಸಲು ಅನುಮತಿ ನೀಡಿದ್ದು, ಅವುಗಳ ಒಟ್ಟು ಸಾಮರ್ಥ್ಯವು 8299.5 ಮೆ.ವ್ಯಾ. ಆಗಿರುತ್ತದೆ. ಅವುಗಳ ವಿವರ ಈ ಕೆಳಕಂಡಂತೆ ಇದೆ.

ಅ) ಎಂ.ಓ.ಯು. ಮುಖಾಂತರ - 17 ಯೋಜನೆಗಳು 7073 ಮೆ.ವ್ಯಾ

ಆ) ಸ್ಪರ್ಧಾತ್ಮಕ ಬಿಡ್ಡಿಂಗ್ ಮುಖಾಂತರ.

1. ಬಹು ಇಂಧನ - 10 ಸಂ-620.6 ಮೆ.ವ್ಯಾ ಆಧಾರಿತ

2. ಬಾರ್ಜ್ ಮೌಂಟ್‌ಡ್-4 ಸಂ-606 ಮೆ. ವ್ಯಾ.

ಈ ಎಲ್ಲಾ ಯೋಜನೆಗಳು ಅಭಿವೃದ್ಧಿಯ ಹಂತದಲ್ಲಿದೆ. ಅವುಗಳಲ್ಲಿ ಯಾವ ಯೋಜನೆಯೂ ಇನ್ನು ಆರ್ಥಿಕ ಮುಕ್ತಾಯ ಹಂತಕ್ಕೆ ತಲುಪಿಲ್ಲುವಾದ ಕಾರಣ ಸದರಿ ಯೋಜನೆಗಳ ಒಟ್ಟು ವೆಚ್ಚವನ್ನು ಇನ್ನೂ ನಿರ್ಧರಿಸಲಾಗಿರುವುದಿಲ್ಲ. ಎಲ್ಲಾ ಯೋಜನೆಗಳ ಒಟ್ಟು ಉತ್ಪಾದನಾ ಸಾಮರ್ಥ್ಯವು 8299.5 ಮೆ.ವ್ಯಾ. ಆಗಿರುತ್ತದೆ.

Annexure - I

Yearwise Details of Financial Resources Such as Under Plan, Non Plan, World Bank And others Etc., Availed for power Generation for the Past 3 years Is as follows :

(Rupees in Crores)

SL. No.	Particulars	1994-95		1995-96		1996-97	
		Plan	Non-plan	Plan	Non-Plan	Plan	Non-Plan
1.	Government of Karnataka	60.18	-	83.11	-	70.00	-
2.	Rural Electrification Corporation	-	50.04	-	68.70	-	85.32
3.	Commercial Banks	-	53.50	-	23.37	-	39.70
4.	Housing Development Finance Corporation	-	13.77	-	-	-	3.63
5.	Industrial Development Bank of India	61.90	-	45.39	-	47.84	-
6.	Power Finance Corporation	-	98.02	-	107.93	-	147.52
7.	Housing & Urban Development Corporation	-	-	-	0.80	-	-
	Total	**122.08**	**215.33**	**128.50**	**200.08**	**117.84**	**276.17**

KARNATAKA POWER CORPORATION LIMITED

1994 - 95 = Rs. 357.00 Crores

1995 - 96 = Rs. 196.00 Crores

1996 - 97 = Rs. 247.00 Crores

KPC has not spent any non-plant amount. No amount spent for other than projects and has not received any bid from world Bank. KFAED firm from Kuwait has extended their aid to Kadra project and OECE firm of Japn aides to RTPS 4th Unit.

4) ಕಾರ್ಯದರ್ಶಿಯವರ ವರದಿ

ಶ್ರೀ ಯಾಕುಬ್ ಷರೀಫ್ (ಕಾರ್ಯದರ್ಶಿ, ವಿಧಾನಮಂಡಲ) : ಅಧ್ಯಕ್ಷರೇ, ಕಳೆದ ಅಧಿವೇಶನದ ನಂತರ ರಾಜ್ಯಪಾಲರು, ರಾಷ್ಟ್ರಪತಿಗಳು ಸಂದರ್ಭಾನುಸಾರ ಒಪ್ಪಿಗೆಯನ್ನು ಪಡೆದಿರುವ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997	25-3-1997	ರಾಜ್ಯಪಾಲರು
2.	ಕರ್ನಾಟಕ ಧನವಿನಿಯೋಗ (ನಂ. 2) ವಿಧೇಯಕ, 1997	31-3-1997	ರಾಜ್ಯಪಾಲರು
3.	ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1997	31-3-1997	
4.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿದೇಯಕ, 1997	31-3-1997	ರಾಜ್ಯಪಾಲರು
5.	ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 1997	31-3-1997	
6.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1997	31-3-1997	ರಾಜ್ಯಪಾಲರು